# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## ಸಿ. ಸಿ. ನಂಃ 431/2018

ಪಿ.ಡಬ್ಲ್ಯೂ- **1**
ಸಿ.ಡಬ್ಲ್ಯೂ- **1**

| | |
|---|---|
| ಹೆಸರು | ಃ- ಪರಮೇಶ್ವರ ಕವಟಗಿ |
| ತಂದೆ / ಗಂಡನ ಹೆಸರು | ಃ- ಗುರುಸಿದ್ಧಪ್ಪ |
| ವಯಾ | ಃ- 41 ವರ್ಷ |
| ಉದ್ಯೋಗ | ಃ- ಪಿ.ಐ. ಲೋಕಾಯುಕ್ತ ಧಾರವಾಡ |
| ವಾಸಸ್ಥಳ | ಃ- ಧಾರವಾಡ |

ಸತ್ಯ ಪ್ರತಿಜ್ಞೆ ಮೇರೆಗೆ - ದಿನಾಂಕಃ 01-10-2024

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

ನಾನು ದಿನಾಂಕ 22-02-2018 ರಿಂದ 19-06-2018 ರವರಿಗೆ ರವರೆಗೆ ಆರಕ್ಷಕರ ಉಪನಿರೀಕ್ಷಕರು ಅಂತಾ ನವಲಗುಂದ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ 15-03-2018 ರಂದು ಬೆಳಗ್ಗೆ ಸುಮಾರು 10-00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಆಯಟ್ಟಿ ಗ್ರಾಮದ ಬಸ್ಸ ನಿಲ್ದಾಣದ ಬಳಿ ರಾಜೇಸಾಬ್ ನದಾಪ್ ಎಂಬಾತನು ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು, ತಕ್ಷಣ ನನ್ನ ಮೇಲಾಧಿಕಾರಿಗಳಿಗೆ ವಿಷಯವನ್ನು ತಿಳಿಸಿ ನನ್ನ ಠಾಣಾ ಸಿಬ್ಬಂದಿಯವರಾದ ಚಾಸಾ-5 ರವರ ಮೂಲಕ ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರಾಗಿ ಬರಮಾಡಿಸಿಕೊಂಡು ಸದರಿಯವರಿಗೆ ಮಾಹಿತಿಯನ್ನು ತಿಳಿಸಿರುತ್ತೇನೆ.

ನಂತರ ನಾನು, ಚಾಸಾ-2 ರಿಂದ ಚಾಸಾ-5 ರವರ ಸಂಗಡ ಇಲಾಖಾ ವಾಹನದಲ್ಲಿ ಸುಮಾರು ಬೆಳಗ್ಗೆ 10-10 ಗಂಟೆಗೆ ಆಯಟ್ಟಿ ಗ್ರಾಮದ ಬಸ್ಸ ನಿಲ್ದಾಣದ ಸಮೀಪ ಹೋಗಿ ನಿಂತು ವೀಕ್ಷಣೆ ಮಾಡುತ್ತಿದ್ದಾಗ ಬಸ್ಸ ನಿಲ್ದಾಣದ ಬಳಿ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿ ಒಂದು ಕೈಚೀಲ ಹಿಡಿದುಕೊಂಡು ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ನೋಡಿರುತ್ತೇವೆ.

ನಂತರದಲ್ಲಿ ಸದರಿ ವ್ಯಕ್ತಿಯನ್ನು ತಡೆದು ಆತನ ಹೆಸರನ್ನು ಕೇಳಿ, ಸದರಿಯವನು ತನ್ನ ಹೆಸರು ರಾಜೇಸಾಬ್ ನದಾಫ್, ಸಾಃ ಆಯಟ್ಟಿ ಅಂತಾ ತಿಳಿಸಿರುತ್ತಾನೆ. ಆತನ ಬಳಿ ಮದ್ಯ ಮಾರಾಟ ಮಾಡಲು ಪರವಾನಿಗೆ ಇದ್ದ ಬಗ್ಗೆ ಕೇಳಲಾಗಿ ಸದರಿಯವನು ಇಲ್ಲಾ ಎಂದು ನುಡಿದಿರುತ್ತಾನೆ.

ನಂತರದಲ್ಲಿ ಆರೋಪಿತನ ಕೈ ಚೀಲದಲ್ಲಿ ಇದ್ದ ವಸ್ತುಗಳನ್ನು ನೋಡಲಾಗಿ ಅಲ್ಲಿ 90 ಎಂ.ಎಲ್ ನ 91 ಹೈವರ್ಡ್ಸ್ ವೀಸ್ಕಿ ಟೆಟ್ರಾಪ್ಯಾಕೇಟಗಳು ಇದ್ದವು. ನಂತರದಲ್ಲಿ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮದಲ್ಲಿ ಸದರಿ ಮದ್ಯದ ಪ್ಯಾಕೇಟಗಳನ್ನು ಬೆಳಗ್ಗೆ ಸುಮಾರು 11-05 ರಿಂದ 12-00 ಗಂಟೆಯವರೆಗೆ ಪಂಚನಾಮೆ ಮಾಡಿ ವಶಪಡಿಸಿಕೊಂಡು, ಅದರಲ್ಲಿ 02 ಪ್ಯಾಕೇಟಗಳನ್ನು ಪ್ರತ್ಯಕವಾಗಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬೇರಪಡಿಸಿ ಬಿಳಿ ಬಟ್ಟೆಯನ್ನು ಸುತ್ತಿ, ಅದರ ಮೇಲೆ ಪಂಚರ ಸಹಿ ಪಡೆದು ಇಲಾಖಾ ಮೊಹರನ್ನು ಹಾಕಿರುತ್ತೇವೆ.

ಸದರಿ ಈಗ ವಶಪಡಿಸಿಕೊಂಡ ಮದ್ಯದ ಪ್ಯಾಕೇಟಗಳನ್ನು ನೋಡುತ್ತಿದ್ದು ಅವುಗಳನ್ನು ಮು.ಮಾಲು 01 ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ನಡೆದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

ನಂತರದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಮತ್ತು ಆರೋಪಿತನನ್ನು ಠಾಣೆಗೆ ಹಾಜರು ಪಡಿಸಿ ಠಾಣಾಧಿಕಾರಿಯ ತಾಬೆಯಲ್ಲಿ ಪಂಚನಾಮೆ ಮತ್ತು ಮುದ್ದೆ ಮಾಲುಗಳನ್ನು ಹಸ್ತಾಂತರಿಸಿ ಠಾಣೆಯಲ್ಲಿ ಗಣಕೀಕೃತ ಪ್ರಥಮ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಪ್ರಥಮ ಮಾಹಿತಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇದ್ದ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು ಃ ಶ್ರೀ ಹೆಚ್ ಡಿ ಜಿ ವಕೀಲರಿಂದ ಃ -</u>

ನಾವು ಆಯಟ್ಟಿ ಗ್ರಾಮಕ್ಕೆ ತಲುಪಲು ಯಾವ ಮಾರ್ಗವಾಗಿ ಹೋಗಿರುತ್ತೇನೆ ಎಂದು ಈಗ ನನಗೆ ನೆನಪಿಲ್ಲ. ಆಯಟ್ಟಿ ಗ್ರಾಮಕ್ಕೆ ತಲುಪಲು ಎಷ್ಟು ಗ್ರಾಮಗಳನ್ನು ದಾಟಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಆಯಟ್ಟಿ ಗ್ರಾಮವು ನವಲಗುಂದದ ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ನನಗೆ ಈಗ ನೆನಪಿಲ್ಲ.

ಆರೋಪಿತನು ಕೈಯಲ್ಲಿ ಹಿಡಿದುಕೊಂಡಿದ್ದ ಎಂದು ಹೇಳಲಾದ ಚೀಲವನ್ನು ವಶಪಡಿಸಿಕೊಂಡಿಲ್ಲ. ಅದು ಯಾವ ಬಣ್ಣದ್ದು ಎಂದು ನನಗೆ ನೆನಪಿಲ್ಲ. ಸದರಿ ಚೀಲವನ್ನು ವಶಪಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

ಚಾಸಾ-2 ಮತ್ತು ಚಾಸಾ-3 ರವರನ್ನು ಬಾತ್ಮಿ ಬಂದ ತಕ್ಷಣದಲ್ಲಿ ಬರಮಾಡಿಸಿಕೊಂಡಿರುತ್ತೇನೆ. ಆಯಟ್ಟಿ ಗ್ರಾಮವು ನವಲಗುಂದದಿಂದ 30 ರಿಂದ 35 ಕೀಲೋಮೀಟರ ಅಂತರದಲ್ಲಿ ಇದೆ.

ಘಟನೆಯ ಪೂರ್ವದಲ್ಲಿ ನಾನು ಯಾವತ್ತು ಆಯಟ್ಟಿ ಗ್ರಾಮಕ್ಕೆ ಹೋಗಿಲ್ಲ.

ನಿಪಿ-1 ಪಂಚನಾಮೆಯನ್ನು ನಮ್ಮ ಸಿಬ್ಬಂದಿ ವರ್ಗದವರು ಯಾರು ಬರೆದಿರುತ್ತಾರೆ. ಅದನ್ನು ನಿಖರವಾಗಿ ಯಾರು ಬರೆದಿದ್ದು ಎಂದು ಈಗ ನನಗೆ ನೆನಪಿಲ್ಲ. ನಿಪಿ-1 ಪಂಚನಾಮೆಯನ್ನು ಚಾಸಾ-2 ಮತ್ತು ಚಾಸಾ-3 ರವರ ಮಾಹಿತಿಯ ಮೇರೆಗೆ ಬರೆಯಲಾಗಿರುತ್ತದೆ.

ಆರೋಪಿತನು ನಿಂತು ಮದ್ಯ ಮಾರಾಟ ಮಾಡುತ್ತಿದ್ದ ಅದನ್ನು ನನ್ನ ಪ್ರಥಮ ಮಾಹಿತಿಯಲ್ಲಿ ಬರೆದಿರುತ್ತೇನೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಆಯಟ್ಟಿ ಗ್ರಾಮದ ಬಸ್ಸ ನಿಲ್ದಾಣದ ಸುತ್ತಮುತ್ತ ಜನಸಾಮಾನ್ಯರ ಓಡಾಟ ಮತ್ತು ಅಂಗಡಿ ಮುಂಗಟ್ಟುಗಳು ಇವೆ ಎಂದರೆ ಸರಿ. ಸ್ಥಳದಲ್ಲಿ ಜನಸಾಮಾನ್ಯರ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಪಡೆದುಕೊಳ್ಳಲು ಯಾವುದೇ ತೊಂದರೆ ಇಲ್ಲಾ.

ನಾನು ಯಾವತ್ತೂ ಆಯಟ್ಟಿ ಗ್ರಾಮಕ್ಕೆ ಹೋಗಿಲ್ಲ, ಅಲ್ಲಿ ಆರೋಪಿತನನ್ನು ನೋಡಿಲ್ಲ, ಆತನ ಬಳಿಯಿಂದ ಯಾವುದೇ ಮುದ್ದೆ ಮಾಲು ಅಥವಾ ಮದ್ಯದ ಪ್ಯಾಕೇಟಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

ಠಾಣೆಯಲ್ಲಿ ವಾರಸುದಾರರ ಇಲ್ಲದ ಮದ್ಯದ ಪ್ಯಾಕೇಟಗಳನ್ನು ಬಳಸಿ, ಠಾಣೆಯ ಅಂಕೆ ಸಂಖ್ಯೆಗೋಸ್ಕರ ಆರೋತಪಿನ ವಿರುದ್ಧ ಠಾಣೆಯಲ್ಲಿಯೆ ಕುಳಿತು ಪಂಚನಾಮೆಯನ್ನು ಬರೆದು ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತನಿಗೆ, ಮುದ್ದೆ ಮಾಲಿಗೂ ಮತ್ತು ಘಟನೆಗೂ ಯಾವುದೇ ಸಂಬಂದ ಇಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**

PW-1
CW-1